ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುಗಳ ಪುನರ್ವಿಂಗಡಣೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಬಹು ವಿಸ್ತಾರವಾದ ತಾಲ್ಲೂಕುಗಳಿದ್ದು ಸುಗಮ ಆಡಳಿತೆಯ ದೃಷ್ಟಿಯಿಂದ ವಿಭಜಿಸಿ ನೂತನ ತಾಲ್ಲೂಕುಗಳ ರಚನೆ ಆಗಬೇಕೆಂಬ ಬೇಡಿಕೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಕುರಿತು ರಚಿಸಲಾದ ಜಿಲ್ಲಾ—ತಾಲ್ಲೂಕು ಪುನರ್ವಿಂಗಡಣಾ ಸಮಿತಿಗಳ ವರದಿಯಲ್ಲಿ ಬೈಂದೂರು ಇತ್ಯಾದಿ ತಾಲ್ಲೂಕುಗಳ ರಚನೆಗಾಗಿ ಶಿಫಾರಸ್ಸು ಮಾಡಲಾಗಿದ್ದು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಇ) ಹೊಸ ತಾಲ್ಲೂಕು — ಜಿಲ್ಲೆಗಳ ರಚನೆ ಕುರಿತು ಸರ್ಕಾರದವರು ಯಾವಾಗ ಯಾವ ನಿರ್ಧಾರ ಕೈಗೊಳ್ಳುವರು ?

ಶ್ರೀ ಅಜೀಜ್ ಸೇಠ್ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಮತ್ತು ಇ) ಜಿಲ್ಲಾ ಪುನರ್ವಿಂಗಡಣಾ ಸಮಿತಿಯ ವರದಿಯು ಪರಿಶೀಲನೆಯಲ್ಲಿದೆ.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೇ, ಹೊಸ ಆಶೋತ್ತರಗಳಿಗೆ ಸ್ಪಂದಿಸುವ ಹೊಸ ಸರ್ಕಾರದವರು ಹಿಂದಿನ ಸರ್ಕಾರದವರು ಕೊಡುತ್ತಿದ್ದಂಥ ಉತ್ತರಗಳನ್ನೇ ಕೊಡುತ್ತಿರುತ್ತಾರೆ. ಜಿಲ್ಲಾ ಪುನರ್ವಿಂಗಡಣಾ ಸಮಿತಿಯ ವರದಿಯು ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಮಾನ್ಯ ಮೊಯಿಲಿಯವರು ಮಾತನಾಡುವಾಗ ಪರಿಶೀಲನೆಯಲ್ಲಿದೆ ಎಂದು ಹೇಳುವುದು ಹಿಂದಿನ ಸರ್ಕಾರದವರು ಕೊಟ್ಟ ಒಂದು ಬಳುವಳಿ ಎಂದು ಹೇಳಿದರು. ಉತ್ತರಗಳು ಹೊಸ ಸರ್ಕಾರದವರು ಕೊಡುವಂಥ ಬಳುವಳಿಯಾಗಬಾರದು. ಹೊಸ ಜಿಲ್ಲೆಗಳು ಮತ್ತು ಹೊಸ ತಾಲ್ಲೂಕುಗಳ ರಚನೆ ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಬಹಳ ವರ್ಷಗಳಿಂದಲೂ ಇದು ನೆನೆಗುದಿಗೆ ಬಿದ್ದಿದೆ. ಈ ಪ್ರಶ್ನೆಯನ್ನು ಪರಿಶೀಲನೆ ಮಾಡಿ ಹೊಸ ಜಿಲ್ಲೆಗಳನ್ನು ಯಾವಾಗ ರಚನೆ ಮಾಡುತ್ತೀರೆಂದು ಕೇಳುತ್ತೇನೆ.

SRI AZEEZ SAIT.— Speaker Sir, this involves lot of financial commitments on the part of the State. It is not the question of only bifurcating the taluks and leave at that there is a plea that all districts need reorganisations and in the process there are taluka reorganisations. It takes some time and the Government is very serious to release the constraints on financial position which is keeping it away for sometime. I assure the members that the matter is under active consideration of the Government.

SRI M. MALLIKARJUN KHARGE.— Is it a Fact that the hon'ble minister has given a statement at Davanagere that Davanagere will be constituted as a district shortly ? So also I want to know whether the hon'ble Minister is going to implement in to to the recommendations of the previous committee in respect of reorganisation ?

SRI AZEEZ SAIT.— The question is of financial commitment. Some of the members have come forward to give all sorts of assistance in creating these districts. The matter is under the consideration of the Government.